# ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆ

ಕೇಂದ್ರ ಕಛೇರಿ: ಬೆಂಗಳೂರು-27.

**ದಿನಾಂಕ 23.06.2018 ರಂದು ಕೇಂದ್ರ ಕಛೇರಿಯಲ್ಲಿ ನಡೆದ ಬೆಂ.ಮ.ಸಾ.ಸಂಸ್ಥೆಯ ಮಂಡಳಿ ನಿರ್ದೇಶಕರ 92ನೇ ಸಭೆಯ ನಡಾವಳಿಗಳು.**

ವಿಷಯ ಸಂಖ್ಯೆ: 07

**ಬೆಂ.ಮ.ಸಾ.ಸಂಸ್ಥೆಯಲ್ಲಿ ಕೇಂದ್ರ ಸರ್ಕಾರದ ಭಾರಿ ಕೈಗಾರಿಕೆ ಇಲಾಖೆಯ ಅನುದಾನದೊಂದಿಗೆ 80 ವಿದ್ಯುತ್‌ಚಾಲಿತ ಬಸ್ಸುಗಳನ್ನು ಅನುದಾನಕ್ಕೆ ಅನುಗುಣವಾಗಿ ಸಹ ಮಾಲಿಕತ್ವದೊಂದಿಗೆ ಒಟ್ಟು ವೆಚ್ಚದ ಮಾದರಿಯಲ್ಲಿ (Gross Cost Model) ಆಚರಣೆಗೊಳಿಸುವ ಬಗ್ಗೆ.**

**Operation of 80 Electric buses in BMTC by availing grants from DHI, GoI with proportional ownership to the incentive on Gross Cost Model.**

7.1) ವ್ಯವಸ್ಥಾಪಕ ನಿರ್ದೇಶಕರು, ವಿಷಯವನ್ನು ಪ್ರಸ್ತಾವಿಸುತ್ತಾ, ಸಂಸ್ಥೆಯಲ್ಲಿ ಕೇಂದ್ರ ಸರ್ಕಾರದ ಭಾರಿ ಕೈಗಾರಿಕೆ ಇಲಾಖೆಯ ಅನುದಾನದೊಂದಿಗೆ 80 ವಿದ್ಯುತ್‌ಚಾಲಿತ ಬಸ್ಸುಗಳನ್ನು ಅನುದಾನಕ್ಕನುಗುಣವಾಗಿ ಸಹ ಮಾಲಿಕತ್ವದೊಂದಿಗೆ ಒಟ್ಟು ವೆಚ್ಚದ ಮಾದರಿಯಲ್ಲಿ (Gross Cost Model) ಆಚರಣೆಗೊಳಿಸುವ ಬಗ್ಗೆ ಮಂಡಳಿ ಟಿಪ್ಪಣಿಯಲ್ಲಿನ ವಿವರಗಳನ್ನು ನೀಡಿದರು.

7.2) ಈ ಹಂತದಲ್ಲಿ ಮಂಡಳಿಯು, ಭಾರತ ಸರ್ಕಾರದ ಭಾರಿ ಕೈಗಾರಿಕೆ ಹಾಗೂ ಸಾರ್ವಜನಿಕ ಉದ್ದಿಮೆಗಳ ಇಲಾಖೆ, ನವದೆಹಲಿ ರವರ ಸೂಚನೆಯಂತೆ ಸಂಸ್ಥೆಯು ಸಹ ಮಾಲಿಕತ್ವವನ್ನು ಹೊಂದಿದಲ್ಲಿ ಸಹ ಮಾಲಿಕತ್ವದ ಕರಾರಿನಲ್ಲಿ ಒಳಗೊಂಡಿರುವ ಅಪಾಯಗಳ ಕುರಿತು ಮತ್ತು ಸಹ ಮಾಲಿಕತ್ವದ ನಿಬಂಧನೆಯು ಸಂಸ್ಥೆಯ ಮೇಲುಂಟುಮಾಡುವ ಅನಾನುಕೂಲಗಳ ಕುರಿತು ಭಾರತ ಸರ್ಕಾರದ ಭಾರಿ ಕೈಗಾರಿಕೆ ಹಾಗೂ ಸಾರ್ವಜನಿಕ ಉದ್ದಿಮೆಗಳ ಇಲಾಖೆ, ನವದೆಹಲಿ ರವರಿಗೆ ತಿಳಿಸಿ, ಸಂಸ್ಥೆಯ ಸಹ ಮಾಲಿಕತ್ವದ ನಿಬಂಧನೆಯನ್ನು ಮರುಪರಿಶೀಲಿಸುವಂತೆ ಕೋರಲು ಸೂಚಿಸಿತು ಮತ್ತು ಒಂದು ವೇಳೆ ಭಾರತ ಸರ್ಕಾರದ ಭಾರಿ ಕೈಗಾರಿಕೆ ಹಾಗೂ ಸಾರ್ವಜನಿಕ ಉದ್ದಿಮೆಗಳ ಇಲಾಖೆಯು ಸಹ ಮಾಲಿಕತ್ವದ ನಿಬಂಧನೆಯನ್ನು ಮರುಪರಿಶೀಲಿಸದಿದ್ದಲ್ಲಿ, ಬಿಡ್‌ದಾರರಿಗೆ, ಅವರ ಮಾಲಿಕತ್ವದ ಪಾಲಿನ ಪ್ರಮಾಣದಷ್ಟು ಮೌಲ್ಯವನ್ನು ಮಾತ್ರ ಸಾಲವಾಗಿ ಪಡೆಯಲು ಅಥವಾ ಇತರೆ ಹೊಣೆಗಾರಿಕೆಗೆ ಅನುಮತಿ ನೀಡಲಾಗುವ, ಕಾರ್ಯಚರಣಾ ಸಮಯದಲ್ಲಿ ಅಸಮರ್ಪಕ ಕಾರ್ಯಕ್ಷಮತೆ ಅಥವಾ ಅಪಘಾತ ಅಥವಾ ಇನ್ಯಾವುದೇ ರೀತಿಯ ಕಾರಣಕ್ಕೆ (liability) ಉದ್ಭವಿಸುವ ಹೊಣೆಗಾರಿಕೆಗಳಿಗೆ ಬಿಡ್‌ದಾರರು ಮಾತ್ರ ಹೊಣೆಗಾರರಾಗಿರುತ್ತಾರೆ ಇದಕ್ಕೆ ಬೆಂ.ಮ.ಸಾ.ಸಂಸ್ಥೆಯು ಹೊಣೆಯಲ್ಲ ಎಂಬ ಷರತ್ತನ್ನು ಬೆಂ.ಮ.ಸಾ.ಸಂಸ್ಥೆ ಮತ್ತು ಬಿಡ್‌ದಾರರ ನಡುವಿನ ಒಪ್ಪಂದದಲ್ಲಿ ನಮೂದಿಸುವ, ಬಿಡ್‌ದಾರರು, ಕಾರ್ಯಾಚರಣಾ ಸಮಯದಲ್ಲಿ ಯಾವುದೇ ರೀತಿಯ ಅಸಮರ್ಪಕ ಕಾರ್ಯಕ್ಷಮತೆ ಅಥವಾ ಇನ್ಯಾವುದೇ ರೀತಿಯ ವೈಫಲ್ಯ ಅಥವಾ ಲೋಪದೋಷಗಳಿಗೆ ಹೊಣೆಯಾದಲ್ಲಿ ಬೆಂ.ಮ.ಸಾ.ಸಂಸ್ಥೆಯು

ಅವರಿಗೆ ನೀಡುವ ಬ್ಯಾಂಕ್ ಖಾತರಿಯನ್ನು ನಗದೀಕರಿಸಿಕೊಳ್ಳುವ (invoke) ಹಕ್ಕನ್ನು ಹೊಂದಿರುವ, ಹಾಗೂ ಬೆಂ.ಮ.ಸಾ.ಸಂಸ್ಥೆ/ ಭಾರತ ಸರ್ಕಾರವು ಬಿಡುಗಡೆಗೊಳಿಸುವ ಪ್ರೋತ್ಸಾಹಧನಕ್ಕೆ ಸಮಾನವಾಗಿ ಬಿಡ್‌ದಾರರು ಬ್ಯಾಂಕ್ ಖಾತರಿಯನ್ನು ಒದಗಿಸತಕ್ಕದ್ದು ಎನ್ನುವ ಈ ಎಲ್ಲಾ ಷರತ್ತುಗಳನ್ನು ಬೆಂ.ಮ.ಸಾ.ಸಂಸ್ಥೆ ಮತ್ತು ಬಿಡ್‌ದಾರರ ನಡುವಿನ ಒಪ್ಪಂದದಲ್ಲಿ ಅಳವಡಿಸಲು ಮಂಡಳಿಯು ನಿರ್ಧರಿಸಿತು ಮತ್ತು ಈ ಎಲ್ಲಾ ಷರತ್ತುಗಳನ್ನು ಒಳಗೊಂಡ ಕರಾರನ್ನು ಸಂಸ್ಥೆಯ ಮುಖ್ಯ ಕಾನೂನು ಅಧಿಕಾರಿ ಮತ್ತು ಹೊರಗಿನ ಕಾನೂನು ತಜ್ಞರ ಪರಿಶೀಲನೆಗೊಳಪಡಿಸಲು ವ್ಯವಸ್ಥಾಪಕ ನಿರ್ದೇಶಕರಿಗೆ ಸೂಚಿಸಲಾಯಿತು.

ಚರ್ಚೆಯ ನಂತರ ಈ ಕೆಳಕಂಡಂತೆ ಠರಾವು ಮಾಡಲಾಯಿತು.

<u>ಠರಾವು ಸಂಖ್ಯೆ: 1736/ 92ನೇ ಸಭೆ ದಿನಾಂಕ 23.06.2018</u>

ಭಾರತ ಸರ್ಕಾರದ ಭಾರಿ ಕೈಗಾರಿಕೆ ಹಾಗೂ ಸಾರ್ವಜನಿಕ ಉದ್ದಿಮೆಗಳ ಇಲಾಖೆ, ನವದೆಹಲಿ ರವರ ಸೂಚನೆಯಂತೆ ಸಂಸ್ಥೆಯು ಸಹ ಮಾಲಿಕತ್ವವನ್ನು ಹೊಂದಿದಲ್ಲಿ ಸಹ ಮಾಲಿಕತ್ವದ ಕರಾರಿನಲ್ಲಿ ಒಳಗೊಂಡಿರುವ ಅಪಾಯಗಳ ಕುರಿತು ಮತ್ತು ಸಹ ಮಾಲಿಕತ್ವದ ನಿಬಂಧನೆಯು ಸಂಸ್ಥೆಯ ಮೇಲುಂಟುಮಾಡುವ ಅನಾನುಕೂಲಗಳ ಕುರಿತು ಭಾರತ ಸರ್ಕಾರದ ಭಾರಿ ಕೈಗಾರಿಕೆ ಹಾಗೂ ಸಾರ್ವಜನಿಕ ಉದ್ದಿಮೆಗಳ ಇಲಾಖೆ, ನವದೆಹಲಿ ರವರಿಗೆ ತಿಳಿಸಿ, ಸಂಸ್ಥೆಯ ಸಹ ಮಾಲಿಕತ್ವದ ನಿಬಂಧನೆಯನ್ನು ಮರುಪರಿಶೀಲಿಸುವಂತೆ ಕೋರಲು ಸೂಚಿಸಿತು ಮತ್ತು ಒಂದು ವೇಳೆ ಭಾರತ ಸರ್ಕಾರದ ಭಾರಿ ಕೈಗಾರಿಕೆ ಹಾಗೂ ಸಾರ್ವಜನಿಕ ಉದ್ದಿಮೆಗಳ ಇಲಾಖೆಯು ಸಹ ಮಾಲಿಕತ್ವದ ನಿಬಂಧನೆಯನ್ನು ಮರುಪರಿಶೀಲಿಸದಿದ್ದಲ್ಲಿ ಈ ಕೆಳಕಂಡ ಷರತ್ತುಗಳಿಗೊಳಪಟ್ಟು ಈ ಯೋಜನೆಯನ್ನು ಮುಂದುವರೆಸಬಹುದು.

1. ಬಿಡ್‌ದಾರರಿಗೆ, ಅವರ ಮಾಲಿಕತ್ವದ ಪಾಲಿನ ಪ್ರಮಾಣದಷ್ಟು ಮೌಲ್ಯವನ್ನು ಮಾತ್ರ ಸಾಲವಾಗಿ ಪಡೆಯಲು ಅಥವಾ ಇತರೆ ಹೊಣೆಗಾರಿಕೆಗೆ ಅನುಮತಿ ನೀಡುವುದು.

2. ಕಾರ್ಯಾಚರಣಾ ಸಮಯದಲ್ಲಿ ಅಸಮರ್ಪಕ ಕಾರ್ಯಕ್ಷಮತೆ ಅಥವಾ ಅಪಘಾತ ಅಥವಾ ಇನ್ನಾವುದೇ ರೀತಿಯ ಕಾರಣಕ್ಕೆ ಉದ್ಭವಿಸುವ ಹೊಣೆಗಾರಿಕೆಗಳಿಗೆ (liability) ಬಿಡ್‌ದಾರರು ಮಾತ್ರ ಹೊಣೆಗಾರರಾಗಿರುತ್ತಾರೆ, ಇದಕ್ಕೆ ಸಂಸ್ಥೆಯು ಹೊಣೆಯಲ್ಲ ಎಂಬ ಷರತ್ತನ್ನು ಬೆಂ.ಮ.ಸಾ.ಸಂಸ್ಥೆ ಮತ್ತು ಬಿಡ್‌ದಾರರ ನಡುವಿನ ಒಪ್ಪಂದದಲ್ಲಿ ನಮೂದಿಸುವುದು.

3. ಬಿಡ್‌ದಾರರು, ಕಾರ್ಯಾಚರಣಾ ಸಮಯದಲ್ಲಿ ಯಾವುದೇ ರೀತಿಯ ಅಸಮರ್ಪಕ ಕಾರ್ಯಕ್ಷಮತೆ ಅಥವಾ ಇನ್ನಾವುದೇ ರೀತಿಯ ವೈಫಲ್ಯ ಅಥವಾ ಲೋಪದೋಷಗಳಿಗೆ ಹೊಣೆಯಾದಲ್ಲಿ ಬೆಂ.ಮ.ಸಾ.ಸಂಸ್ಥೆಯು ಅವರು ನೀಡುವ ಬ್ಯಾಂಕ್ ಖಾತರಿಯನ್ನು ನಗದೀಕರಿಸಿಕೊಳ್ಳುವ (invoke) ಹಕ್ಕನ್ನು ಹೊಂದಿರುತ್ತದೆ.

"ದೃಢೀಕರಿಸಿದೆ"

ಕಾರ್ಯದರ್ಶಿ
ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆ

4. ಬೆಂ.ಮ.ಸಾ.ಸಂಸ್ಥೆ/ ಭಾರತ ಸರ್ಕಾರವು ಬಿಡುಗಡೆಗೊಳಿಸುವ ಪ್ರೋತ್ಸಾಹಧನಕ್ಕೆ ಸಮಾನವಾಗಿ ಬಿಡ್‌ದಾರರು ಬ್ಯಾಂಕ್ ಖಾತರಿಯನ್ನು ಒದಗಿಸತಕ್ಕದ್ದು.

5. ಇದಲ್ಲದೇ, ಈ ಎಲ್ಲಾ ಷರತ್ತುಗಳನ್ನು ಒಳಗೊಂಡ ಕರಾರನ್ನು ಸಂಸ್ಥೆಯ ಮುಖ್ಯ ಕಾನೂನು ಅಧಿಕಾರಿ ಮತ್ತು ಹೊರಗಿನ ಕಾನೂನು ತಜ್ಞರ ಪರಿಶೀಲನೆಗೊಳಪಡಿಸಲು ವ್ಯವಸ್ಥಾಪಕ ನಿರ್ದೇಶಕರಿಗೆ ಸೂಚಿಸಲಾಯಿತು.

**<u>Resolution No: 1736 / 92nd Board Meeting dated 23.06.2018</u>**

**Board resolved that DHI, GoI., may be informed of the risks involved in the ownership condition being insisted by DHI. It was also resolved that the disadvantages of ownership condition be explained to DHI and DHI may be requested to reconsider ownership condition. If DHI does not reconsider the condition of joint ownership, the project may be taken forward subject to following conditions.**

1. **The bidder will be permitted to raise loan or create any other liability only to the extent of his share in the property.**
2. **In the event of any non performance or accident related or any other liability, the whole of liability shall get assigned only to the bidder and not on BMTC. This condition may be incorporated in the contract agreement between BMTC and bidder.**
3. **In the event of non performance or any other failure or default on the part of bidder, the BMTC shall have right to invoke Bank Guarantee, provided by the bidder.**
4. **The Bank Guarantee shall be provided by the bidder equivalent to the incentive amount released by BMTC/GoI.**
5. **In addition, Board also directed Managing Director to incorporate all these conditions and get it vetted by Chief Law Officer, BMTC and one outside legal expert.**

"ದೃಢೀಕರಿಸಿದೆ"

ಕಾರ್ಯದರ್ಶಿ
ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆ